**1 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

ಸತ್ರ ಮೊಕದ್ದಮೆ  ನಂಃ **40/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಇಸ್ರಾನಾಯ್ಕ | ಪಿಡಬ್ಲ್ಯೂ- 03 |
| ತಂದೆಯ ಹೆಸರು | - ಸಕ್ರಾನಾಯ್ಕ | ಸಿಡಬ್ಲ್ಯೂ- 15 |
| ವಯಸ್ಸು | - 45 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಕರಕುಚ್ಚಿ ತಾಂಡ್ಯ | |

ದಿನಾಂಕಃ 28.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ :  ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತು. 1 ನೇ ಆರೋಪಿ ನನ್ನ ದೊಡ್ಡಪ್ಪನ ಮಗನ ಹೆಂಡತಿ. 2 ನೇ ಆರೋಪಿ ನನ್ನ ಸೋದರತ್ತೆಯ ಮಗ. ಫ್ರಾಸಾ.1 ಮತ್ತು ಮೃತ ನವೀನ್ ಸಹ ನನ್ನ ಸಂಬಂಧಿಕರು. ಚಾಸಾ.2 ರಿಂದ 8, 10 ಗೊತ್ತು. ಫ್ರಾಸಾ.2 ರವರು ಮೃತನ ತಾಯಿ. ಚಾಸಾ.16 ನನ್ನ ತಮ್ಮನ ಹೆಂಡತಿ. ಚಾಸಾ.17 ಗೊತ್ತು, ಆಕೆ ಮೃತನ ನಾದಿನಿ. ಚಾಸಾ.18 ನನ್ನ ಸಂಬಂಧಿ.
2. ಕರಕುಚ್ಚಿ ತಾಂಡ್ಯದಲ್ಲಿ ಮೃತನ ಮತ್ತು ನಮ್ಮ ಮನೆ ಒಂದೇ ಬೀದಿಯಲ್ಲಿದೆ, ನಮ್ಮ ಪಕ್ಕದ ಬೀದಿಯಲ್ಲಿ 1 ನೇ ಆರೋಪಿಯ ಮನೆ ಇದೆ. ಚಾಸಾ.16 ಮತ್ತು 1 ನೇ ಆರೋಪಿಯ ಮನೆಗಳು ಅಕ್ಕಪಕ್ಕದಲ್ಲಿವೆ, ಅವರ ಮನೆಗಳ ನಡುವೆ ಒಂದು ರಸ್ತೆ ಇದೆ.

3. ಈಗ್ಗೆ ಒಂದರಿಂದ ಒಂದೂವರೆ ವರ್ಷದ ಹಿಂದೆ ಒಂದು ದಿನ ನಾನು ಕರಕುಚ್ಚಿ ತಾಂಡ್ಯದ ಬಸ್ ನಿಲ್ದಾಣದಲ್ಲಿ ಇದ್ದೆನು. ಆಗ ಸಮಯ ಮಧ್ಯಾಹ್ನ ಸುಮಾರು 12 ಗಂಟೆಯಾಗಿತ್ತು. ನಂತರ ನಾನು ಅಲ್ಲಿಂದ ಹೊರಟು ನಮ್ಮ ಮನೆಯ ಕಡೆ ಹೋಗುತ್ತಿದ್ದೆನು. ಆಗ ಚಾಸಾ.16 ರವರು 1 ನೇ ಆರೋಪಿಯ ಮನೆಯ ಬಳಿ ಗಲಾಟೆಯಾಗುತ್ತಿದೆ ಎಂದು ಕೂಗಿಕೊಂಡು ಬಂದರು. ಆಗ ನಾನು 1 ನೇ ಆರೋಪಿಯ ಮನೆಯ ಹತ್ತಿರ ಹೋದೆನು. ಗಲಾಟೆಯ ಶಬ್ಧವನ್ನು ಕೇಳಿ ಅಕ್ಕಪಕ್ಕದ ಮನೆಯ ಜನರು ಗುಂಪು ಸೇರಿದ್ದರು. ನಾನು ನೋಡಿದಾಗ 1 ನೇ ಆರೋಪಿ ಮತ್ತು ನವೀನ್ ರವರು 1 ನೇ ಆರೋಪಿಯ ಮನೆಯ ಮುಂದೆ ಜಗಳವಾಡುತ್ತಿದ್ದರು, ಇಬ್ಬರಿಗೂ ರಕ್ತಗಾಯಗಳಾಗಿದ್ದವು. 1 ನೇ ಆರೋಪಿ ಮತ್ತು ನವೀನ್ ರವರು ಒಂದೇ ಮಚ್ಚನ್ನು ತಮ್ಮ ಕೈಗಳಲ್ಲಿ ಹಿಡಿದಿದ್ದರು.

4. ನಂತರ ನಾನು, ಚಾಸಾ.17 ಶಿಲ್ಪಾ ಮತ್ತು ಚಾಸಾ.18 ಸಂತೋಷರವರು ಗಾಯಗೊಂಡಿದ್ದ ನವೀನ್ ರವರನ್ನು ಚಾಸಾ.18 ರವರ ಕಾರಿನಲ್ಲಿ ರಂಗೇನಹಳ್ಳಿಯಲ್ಲಿರುವ ಕರಾವಳಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನವೀನ್ ರವರ ತಲೆಯ ಭಾಗಗಳಲ್ಲಿ ರಕ್ತಗಾಯವಾಗಿದ್ದವು. ವೈದ್ಯರು ಹೇಳಿದ ಬಳಿಕ ಸದರಿ ಗಾಯಗಳು ಮಚ್ಚಿನಿಂದ ಹಲ್ಲೆ ಮಾಡಿದ ಗಾಯಗಳು ಎಂದು ತಿಳಿಯಿತು. ಯಾವ ವಿಚಾರಕ್ಕೆ 1 ನೇ ಆರೋಪಿ ಮತ್ತು ನವೀನ್ ನ ನಡುವೆ ಗಲಾಟೆಯಾಗುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನವೀನ್ ರವರು 1 ನೇ ಆರೋಪಿಯ ಮನೆಯ ಬಳಿ ಏಕೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆಯಾದ 15 ರಿಂದ 20 ದಿನಗಳ ಒಳಗೆ ಪೊಲೀಸರು ನನ್ನನ್ನು ತರೀಕೆರೆಗೆ ಕರೆಸಿದ್ದರು. ಆಗ ನಾನು ಅವರಿಗೆ

ಈ ದಿನ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ಕೊಟ್ಟೆನು. ಆದಾದ ಒಂದು ತಿಂಗಳ ಬಳಿಕ ಪೊಲೀಸರು ನನ್ನನ್ನು ತರೀಕೆರೆ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಜಡ್ಜರವರು ಏನಾಯಿತು ಎಂದು ವಿಚಾರಿಸಿದರು, ಆಗ ನಾನು ಅವರಿಗೂ ಸಹ ಈ ದಿನ ಹೇಳಿದ ವಿಚಾರಗಳನ್ನು ತಿಳಿಸಿ ಹೇಳಿಕೆ ಕೊಟ್ಟೆನು. ಘಟನೆಯ ಬಗ್ಗೆ ನನಗೆ ಬೇರೆ ಯಾವುದೇ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಮತ್ತೊಂದು ಬಾರಿ ಯಾವುದೇ ಹೇಳಿಕೆಯನ್ನು ನೀಡಿಲ್ಲ.

5. ಆ ದಿನ 1 ನೇ ಆರೋಪಿ ಮತ್ತು ಮೃತ ನವೀನ್ ಹಿಡಿದಿದ್ದ ಮಚ್ಚನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ, ಕಾರಣ ಅದಕ್ಕೆ ರಕ್ತವಾಗಿತ್ತು. ಆ ದಿನ ಮೃತ ನವೀನ್ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈಗಾಗಲೇ ಮು.ಮಾ.1 ಮತ್ತು 2 ಎಂದು ಗುರುತಿಸಲ್ಪಟ್ಟಿರುವ ಕಾಫಿ ಬಣ್ಣದ ಟೀಶರ್ಟ್‌ನ್ನು ಮತ್ತು ನೀಲಿ ಬಣ್ಣದ ಪ್ಯಾಂಟನ್ನು ನೋಡಿ ಗುರುತಿಸಿ ಘಟನಾ ಸಮಯದಲ್ಲಿ ಮೃತ ನವೀನ್ ಧರಿಸಿದ್ದ ಬಟ್ಟೆಗಳು ಅವೇ ಎಂದು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

6. ನೀವು ಮತ್ತು ಚಾಸಾ.17 ಮತ್ತು 18 ರವರು ಗಾಯಗೊಂಡಿದ್ದ ನವೀನ್‌ನ್ನು ಚಾಸಾ.18 ರವರ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾಗ ಚಾಸಾ.17 ರವರು ನವೀನನ್ನು ಕುರಿತು ಏನಾಯಿತು ಎಂದು ಕೇಳಿದರು ಎಂದರೆ ಸಾಕ್ಷಿ ನಾವು ಕಾರನ್ನು ಜೋರಾಗಿ ಓಡಿಸಿಕೊಂಡು ಹೋಗುತ್ತಿದ್ದೆವು, ಚಾಸಾ.17 ರವರು ನವೀನ್‌ನ ಬಳಿ ಏನೋ ಮಾತನಾಡುತ್ತಿದ್ದರು ಎನ್ನುತ್ತಾರೆ. ಚಾಸಾ.17 ರವರು ನವೀನ್‌ನ್ನು ವಿಚಾರಿಸಿದಾಗ ಆತ, "ನಾನು ತೋಟಕ್ಕೆ ನೀರನ್ನು ಬಿಟ್ಟು ಬಂದು ಮನೆಯಲ್ಲಿ ಮಲಗಿದ್ದಾಗ ನಾಗ್ಯಾನಾಯ್ಕನು ನಮ್ಮ ಮನೆಗೆ ಬಂದು ಜ್ಯೋತಿಬಾಯಿ ನಿಮಗೆ ಕೊಡಬೇಕಾಗಿರುವ ದುಡ್ಡನ್ನು ಕೊಡುತ್ತಾರೆ ಬಾ ಹೋಗೋಣ ಎಂದು ಹೇಳಿ ನನ್ನನ್ನು ಬೈಕಿನಲ್ಲಿ ಕೂರಿಸಿಕೊಂಡು ಮಧಾಹ್ನ 12.10 ಗಂಟೆಗೆ ನನ್ನನ್ನು ಜ್ಯೋತಿಬಾಯಿಯ ಮನೆಯ ಹತ್ತಿರ ಬಿಟ್ಟು ಹೋದನು, ನಂತರ ನಾನು ಜ್ಯೋತಿಬಾಯಿಯ ಮನೆಯೊಳಗೆ ಹೋಗಿ ದೇವರ ಕೋಣೆಯ ಪಕ್ಕದ ರೂಮಿನಲ್ಲಿರುವ ಸೋಫಾದ ಮೇಲೆ ಕುಳಿತ್ತಿದ್ದಾಗ ಜ್ಯೋತಿಬಾಯಿ ನನಗೆ ಅನುಮಾನಬಾರದಂತೆ ನೀನು ನನ್ನ ಮೇಲೆ ಹೀಗೇಕೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದೀಯಾ, ನಿನಗೆ ಏನು ಬೇಕು, ನಾನು ಬೇಕಾ, ಹಾಗಾದರೆ ನೀನು ಇಷ್ಟಪಟ್ಟಂತೆ ನಿನಗೆ ನಾನು ಎಲ್ಲವನ್ನೂ ನೀಡುತ್ತೇನೆ ಎಂದು ಅವಳ ಬಟ್ಟೆಯನ್ನು ಬಿಚ್ಚಿ ಅರೆಬೆತ್ತಲೆಯಾಗಿ ನಿನಗೆ ಒಂದು ಸಪ್ರೈಸ್ ಕೊಡುತ್ತೇನೆ, ನೀನು ಕಣ್ಣಿಗೆ ಬಟ್ಟೆ ಕಟ್ಟಿಕೋ ಎಂದು ಹೇಳಿದಳು, ಅದಕ್ಕೆ ನಾನು ಬಟ್ಟೆ ಕಟ್ಟಿಕೊಳ್ಳುವುದಿಲ್ಲ ಹಾಗೆಯೇ ತಲೆ ಬಗ್ಗಿಸುತ್ತೇನೆ

ಎಂದು ಹೇಳಿ ತಲೆ ಬಗ್ಗಿಸಿದ ತಕ್ಷಣ ಜ್ಯೋತಿಬಾಯಿ ಮನೆಯಲ್ಲಿ ಇಟ್ಟಿದ್ದ ಕಬ್ಬಿಣದ ಮಚ್ಚಿನಿಂದ ಸೋಫಾದ ಮೇಲೆ ಕುಳಿತ್ತಿದ್ದ ನನ್ನ ತಲೆಗೆ ಹಿಂದಿನಿಂದ ಜೋರಾಗಿ ಕಡಿದಿದ್ದು ತಕ್ಷಣ ನಾನು ಹಿಂದೆ ತಿರುಗಿ ನೋಡಿದ್ದು ಏನೋ ಸೂಳೆಮಗನೇ, ನಾನು ನಿನಗೆ ದುಡ್ಡು ಕೊಡಬೇಕೆನೋ, ಕೊಡೋದಿಲ್ಲ ಕಣೋ, ನಾನು ಸರಿ ಇಲ್ಲವೇನೋ, ಹಾಗಂತ ನೀನು ನನ್ನ ಮೇಲೆ ಊರಿನಲ್ಲಿ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿಯೆನೋ, ಇದರಿಂದಾಗಿ ನನ್ನ ಜೀವನವೇ ಹಾಳಾಯಿತಲ್ಲೋ ನನಗೆ ನೆಮ್ಮದಿನೇ ಇಲ್ಲವಲ್ಲೋ ಎಂದು ಅವಾಚ್ಯವಾಗಿ ಬೈದು, ನೀನು ಬದುಕುವುದೇ ಬೇಡ ಈ ದಿನ ನಿನ್ನನ್ನು ಉಳಿಸುವ ಮಾತೇ ಇಲ್ಲ, ಈ ದಿನವೇ ನಿನ್ನನ್ನು ಕೊಲೆ ಮಾಡಿಯೇ ತಿರುತ್ತೇನೆ ಎಂದು ಹೇಳಿ ಹಲವಾರು ಬಾರಿ ನೀನು ಸಾಯಿ ಎಂದು ಅವಳ ಕೈಯಲ್ಲಿದ್ದ ಮಚ್ಚಿನಿಂದ ನನ್ನ ತಲೆಗೆ ಕಡಿದಳು, ನನ್ನ ತಲೆಯಲ್ಲಿ ವಿಪರೀತ ರಕ್ತ ಬರುತ್ತಿದ್ದು, ಎಲ್ಲಿ ನನ್ನನ್ನು ಸಾಯಿಸಿ ಬಿಡುತ್ತಾಳೋ ಎಂದು ತಿಳಿದು ನಾನು ಕೂಗುತ್ತಾ ಮನೆಯಿಂದ ಹೊರಗೆ ಬಂದಾಗ ಟಾಕ್ರಾನಾಯ್ಕುರವರ ಹೆಂಡತಿ ಪಂಕಜರವರು ನನ್ನನ್ನು ನೋಡಿ ಕೂಗಿಕೊಂಡು ಹೋದಾಗ" ಎಂದು ಈಗ ಓದಿ ಹೇಳಿದ ರೀತಿ ನವೀನ್‌ರವರು ತಿಳಿಸಿದರು ಎಂದರೆ ಸಾಕ್ಷಿ ನಾನು ಅದನ್ನು ಕೇಳಿಸಿಕೊಂಡಿಲ್ಲ ಎನ್ನುತ್ತಾರೆ. ಸದರಿ ವಿಚಾರವನ್ನು ನೀವು ಕೇಳಿಸಿಕೊಂಡಿದ್ದು ಅದನ್ನು ನೀವು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಾ ಎಂದರೆ ಸರಿಯಲ್ಲ. ಅದೇ ರೀತಿ "ನಮ್ಮೂರಿನ ನಾಗ್ಯಾನಾಯ್ಕು ಮತ್ತು ಜ್ಯೋತಿಬಾಯಿ ಸೇರಿಕೊಂಡು ನವೀನನ ಮೇಲಿನ ಹಳೇ ದ್ವೇಷದಿಂದ ನವೀನನ್ನು ಕೊಲೆ ಮಾಡಬೇಕೆಂದು ಮಾತನಾಡಿಕೊಂಡು ನಾಗ್ಯಾನಾಯ್ಕುನು ನವೀನನನ್ನು ಜ್ಯೋತಿಬಾಯಿ ಮನೆಗೆ ಕರೆದುಕೊಂಡು ಹೋಗಿ

ಬಿಟ್ಟರೆ ಜ್ಯೋತಿಬಾಯಿ ನವೀನನ್ನು ಕೊಲೆ ಮಾಡುತ್ತಾಳೆಂದು ಗೊತ್ತಿದ್ದರೂ ಸಹ ನವೀನನ್ನು ಜ್ಯೋತಿಬಾಯಿಯ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದರಿಂದ ಜ್ಯೋತಿಬಾಯಿಯು ನವೀನನಿಗೆ ಮಚ್ಚಿನಿಂದ ತಲೆಗೆ ಕಡಿದು ಕೊಲೆ ಮಾಡಿದ್ದಾಗಿರುತ್ತೆ ವಿನಃ ಬೇರೆ ಯಾವುದೇ ಕಾರಣ ಇರುವುದಿಲ್ಲ" ಎಂದು ಈಗ ಓದಿ ಹೇಳಿದ ರೀತಿ ಸಹ ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಸದರಿ ಭಾಗಗಳನ್ನು ನಿಪಿ.27 ಎಂದು ಗುರುತಿಸಲಾಯಿತು.

7. ತರೀಕೆರೆ ನ್ಯಾಯಾಧೀಶರಿಗೆ ಹೇಳಿಕೆಯನ್ನು ಕೊಟ್ಟ ನಂತರ ದಿಃ 06-03-2024 ರಂದು ಪೊಲೀಸರು ತರೀಕೆರೆ ವೃತ್ತ ನಿರೀಕ್ಷಕರವರ ಕಛೇರಿಗೆ ನಿಮ್ಮನ್ನು ಕರೆಸಿದ್ದರು ಎಂದರೆ ಸರಿಯಲ್ಲ. ಆ ದಿನ ನೀವು ತನಿಖಾಧಿಕಾರಿಗಳಿಗೆ ಮರು ಹೇಳಿಕೆಯನ್ನು ನೀಡಿ ಜಗಳವನ್ನು ಬಿಡಿಸಿ ಗಾಯಗೊಂಡಿದ್ದ ನವೀನನ್ನು ಅವರ ಮನೆಯ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಂದ ಆತನನ್ನು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗಿ ತಿಳಿಸಿದ್ದೀರಿ ಎಂದರೆ ಸರಿ.

8. ಆರೋಪಿತರು ನಿಮ್ಮ ಸಂಬಂಧಿಕರಾಗಿರುವ ಕಾರಣ ನೀವು ಘಟನೆಯ ಬಗ್ಗೆ ಪೊಲೀಸರಿಗೆ ನಿಪಿ.27 ರಂತೆ ಹೇಳಿಕೆ ನೀಡಿ ಘಟನಾ ಸಮಯದಲ್ಲಿ ಕೃತ್ಯಕ್ಕೆ ಬಳಸಿದ ಮಚ್ಚನ್ನು ನೋಡಿದ್ದರೂ ಸಹ ಅದನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಿ.ಆರ್.ಪಿ.ಸಿ ಕಲಂ 231(2) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿರುವ ಆದೇಶದಂತೆ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ